ದಿನಾಂಕ 20-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಪಿ. ಕೆ ವಕೀಲರವರಿಂದಃ**

ನಾನು ಅರ್ಜಿದಾರರ ಪರ ಸಾಕ್ಷಿದಾರನಾಗಿರುತ್ತೇನೆ. ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 14 ಎಂದು, ಅರ್ಜಿದಾರರಿಗೆ ಅಂಗನ್ಯೂನತಾ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯವರು ಅಂಗನ್ಯೂನತೆಯ ಪ್ರಮಾಣ ಪತ್ರ ಮತ್ತು ಅದರಲ್ಲಿರುವ ಸಹಿಯನ್ನು ಸಾಕ್ಷಿಯವರು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 10 ಎಂದು ಗುರುತಿಸಲಾಗಿದ್ದು ಸಾಕ್ಷಿಯವರ ಸಹಿಯನ್ನು ನಿಪಿ. 10 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರ ಪರ ಎಂ. ಆರ್ ವಕೀಲರಿಂದಃ**

ಅರ್ಜಿದಾರರಿಗೆ ಪ್ರಾಥಮಿಕ ಚಿಕಿತ್ಸೆಯನ್ನು ನೀವೇ ನೀಡಿರುತೀರಾ ಎಂದರೆ ಹೌದು. ಅರ್ಜಿದಾರರಿಗೆ ಆಗಿತ್ತು ಎಂದು ಹೇಳುವ ಮೂಳೆ ಮುರಿತವು ಸರಿಯಾಗಿ ಜೋಡಣೆಯಾಗಿದೆ ಎಂದರೆ ಹೌದು. ಅರ್ಜಿದಾರರಿಗೆ ಅಳವಡಿಸಿರುವ ಒಳ ಸಾಧನವನ್ನು ತೆಗೆಯುವುದು ಹೊರತು ಪಡಿಸಿ ಬೇರೆ ಚಿಕಿತ್ಸೆ ಬಾಕಿ ಇಲ್ಲ ಎಂದರೆ ಸರಿ. ಅರ್ಜಿದಾರರಿಗೆ ಅಳವಡಿಸಿರುವ ಒಳ ಸಾಧನವನ್ನು ಕಡ್ಡಾಯವಾಗಿ ತೆಗೆಯಲೇ ಬೇಕು ಎಂದು ಸೂಚಿಸಿರುತ್ತೀರಾ ಎಂದರೆ ತೆಗೆಯಬೇಕಾಗುತ್ತದೆ ಎಂದು ಸಲಹೆ ಮಾಡುತ್ತೇವೆ. ಅರ್ಜಿದಾರರ ದೇಹದ ಯಾವ ಭಾಗಕ್ಕೆ ಅಂಗನ್ಯೂನತೆಯನ್ನು ನೀಡಿರುತ್ತೀರಿ ಎಂದರೆ ಎಡ ಮುಂಗೈಗೆ ಸಂಬಂಧಿಸಿದಂತೆ ಅಂಗನ್ಯೂನತೆ ಇದೆ ಎಂದು ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಅರ್ಜಿದಾರರಿಗೆ ನೀವು ನೀಡಿರುವ ಅಂಗನ್ಯೂನತೆಯ ಪ್ರಮಾಣವು ಅವರ

ಸಂಪೂರ್ಣ ದೇಹಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಹೌದು. ಅರ್ಜಿದಾರರಿಗೆ ಅಳವಡಿಸಿರುವ ಒಳ ಸಾಧನವನ್ನು ತೆಗೆಯುವುದರಿಂದ ಅವರ ಅಂಗನ್ಯೂನತೆಯ ಪ್ರಮಾಣವು ಕಡಿಮೆಯಾಗುತ್ತದೆ ಎಂದರೆ ಕಡಿಮೆಯಾಗುವ ಸಾಧ್ಯತೆ ಇರುತ್ತದೆ.

ಅಂಗನ್ಯೂನತೆಯನ್ನು ನಿರ್ಧರಿಸಲು ನೀವು ಯಾವ ಅಂಶಗಳನ್ನು ಗಮನಿಸಿರುತ್ತೀರಿ ಎಂದರೆ ಎಕ್ಸ್ರೇ ವರದಿ, ಚಲನ ವಲನ, ಅವರಿಗೆ ಕಾಣಿಸಬಹುದಾದಂತಹ ನೋವು ಇವುಗಳನ್ನು ಗಮನದಲ್ಲಿ ಇಟ್ಟುಕೊಂಡು ಅಂಗನ್ಯೂನತೆಯನ್ನು ನೀಡುತ್ತೇನೆ. ಅರ್ಜಿದಾರರಿಗೆ ನೀಡಿರುವ ಅಂಗನ್ಯೂನತೆಯ ಪ್ರಮಾಣವನ್ನು ನಿರ್ಧರಿಸಲು ಮಾಡಿರುವ ಲೆಕ್ಕಾಚಾರವನ್ನು ನಿಮ್ಮ ಆಸ್ಪತ್ರೆಯ ಕೇಸು ಶೀಟ್ನಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಇಲ್ಲ. ಅರ್ಜಿದಾರರು ಸ್ಪೋರ್ಟ್ಸ್ ಆಡುತ್ತಾರೆ ಎಂದರೆ ಹೌದು. ಅರ್ಜಿದಾರರು ನಿಮ್ಮ ಆಸ್ಪತ್ರೆಗೆ ಯಾವ ದಿನದಂದು ಒಳ ರೋಗಿಯಾಗಿ ದಾಖಲಾಗಿರುತ್ತಾರೆ ಎಂದರೆ 08-11-25023 ರಂದು ಹೊರ ರೋಗಿಯಾಗಿ ಚಿಕಿತ್ಸೆಯನ್ನು ಪಡದಿದ್ದು, ದಿಃ 23-11-2023 ರಿಂದ 26-11-2023 ರವರೆಗೆ ಒಳರೋಗಿಯಾಗಿ ಚಿಕಿತ್ಸೆ ಯನ್ನು ಪಡೆದಿರುತ್ತಾರೆ.

ಅಪಘಾತವಾಗಿದೆ ಎಂದು ಹೇಳುವ ಸಮಯದಲ್ಲಿ ಅರ್ಜಿದಾರರು ಏನು ಕೆಲಸ ಮಾಡುತ್ತಿದ್ದಾರೆಂದು ವಿಚಾರಿಸಿ ನಿಮ್ಮ ಆಸ್ಪತ್ರೆಯ ದಾಖಲೆಗಳಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಇಲ್ಲ. ಅರ್ಜಿದಾರರ ಕೆಲಸದ ಆಧಾರದ ಮೇಲೆ ಅಂಗನ್ಯೂನತೆಯನ್ನು ನಿರ್ಧಾರ ಮಾಡಿರುವುದಿಲ್ಲ ಎಂದರೆ ಹೌದು. ಅರ್ಜಿದಾರರಿಗೆ ಅಳವಡಿಸಿರುವ ಒಳ ಸಾಧನವನ್ನು ತೆಗೆಯಲು 50- 60 ಸಾವಿರ ಖರ್ಚು ಆಗುತ್ತದೆ

ಎಂದು ಹೇಳಿರುತ್ತೀರಿ ಅದನ್ನು ಅಂದಾಜಿನ ಮೇಲೆ ಹೇಳಿರುವುದು ಎಂದರೆ ಹೌದು. ಅದು ಸರ್ಕಾರಿ ಆಸ್ಪತ್ರೆ ಗಳಲ್ಲಿ ಕಡಿಮೆ ಯಾಗಬಹುದು ಎಂದರೆ ಆಗಬಹುದು.



ಅರ್ಜಿದಾರರಿಗೆ ಯಾವುದೇ ಅಂಗನ್ಯೂನತೆ ಯು ಇರುವುದಿಲ್ಲ ಅವರು ನಿಮ್ಮನ್ನು ಮನವಿ ಮಾಡಿಕೊಂಡ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಅಂಗನ್ಯೂನತೆ ಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಅರ್ಜಿದಾರರು ನಿಮಂ ಆಸ್ಪತ್ರೆಗೆ ಯಾವ ದಿನದಂದು ಕೊನೆಯ ಬಾರಿ ಬಂದಿರುತ್ತಾರೆ ಎಂದರೆ ದಿಃ 14-04-2025 ರಂದು ಅಂಗನ್ಯೂನತೆಯ ಪ್ರಮಾಣ ಪತ್ರವನ್ನು ಪಡೆಯಲು ಬಂದಿರುತ್ತಾರೆ. ನೀವು ಹೇಳುವಂತೆ ಅರ್ಜಿದಾರರಿಗೆ ಮುಂದಿನ ಚಿಕಿತ್ಸೆಯ ಅಗತ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಮುಂದಿನ ಚಿಕಿತ್ಸೆ ಗಾಗಿ ಹಣದ ಅಗತ್ಯವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಹೆ.ಹಿ.ಸಿ.ನ್ಯಾ ಉಡುಪಿ.